

# ನಮ್ಮೂರ ಭಾಷಿಯೂ ವಿಶಿಷ್ಟ ಹವಾಮಾನವೂ

‘ಕಾಲಗಳು ಮೂರು; ಬ್ಯಾಸ್ಗಿ ಕಾಲ, ಮಳ್ಗಾಲ ಮತ್ತು ಚಳಿಗಾಲ’ ಎಂದ್ ಶಾಲೆಲಿ ಬಾಯ್ ಪಾಠ ಮಾಡ್ರೂ ನಮ್ಮೂರಗೆ ಹೆಚ್ಚಿಪ್ಪುದು ಬ್ಯಾಸ್ಗಿ ಮತ್ ಮಳಿ…’

ಕುಂದಾಪ್ರ ನುಡಿ ಸೊಬಗು

■ ಬಿ. ಶೋಭಾ ಅರಸ

ಹ್ವಾಯ್… ಹ್ವಾಯ್ ಎಂದಟ್ಟಿಗೆ ನನ್ ಭಾಷಿ ಕುಂದಾಪ್ರದ ಕುಂದಗನ್ನಡ ಎಂದ್ ಗೊತ್ತಾಯ್ತ್ ಅಲ್ದಾ. ಹೌದ್ ಮಾರ್ರೆ ಕೇಂಬುಕೆ ಲಾಯ್ಕ್ ಆದರೆ ಓದುಕೆ ಸ್ವಲ್ಪ್ ಕಷ್ಟವೆ. ನಮ್ಮ್ ಭಾಷಿ ಹೀಂಗ್ ಆಪುಕೆ ಒಂದ್ ಕತಿ ಇತ್ತೆ. ಪರಶುರಾಮರು ಇಪ್ಪತ್ತೊಂದು ಬಾರಿ ಭೂಪ್ರದಕ್ಷಿಣೆ ಮಾಡಿ ಕ್ಷತ್ರಿಯರನ್ನೆಲ್ಲಾ ಸಂಹಾರ ಮಾಡಿ ಕಡಿಗೆ ತಪಸ್ಸು ಮಾಡುಕೆ ಜಾಗ ಬೇಕೆಂದ್ ಸಮುದ್ರ ರಾಜನ್ ಕೇಂಡ್ರ್.

ಆಗ ಸಮುದ್ರ ರಾಜ ಪರಶುರಾಮರು ತಮ್ಮ ಕೊಡ್ಲಿ ಬಿಸಾಕಿದ್ದ್ ದೂರದಷ್ಟು ಹಿಂದೋಯಿ ಭೂಮಿ ಬಿಟ್ ಕೊಟ್ಟ್ರ್. ಅಲ್ಲಿ ಇಪ್ಪುಕೆ ಪರಶುರಾಮರು ಬೇರೆಬದಿಯಿಂದ ಜನಗಳನ್ನ್ ತಂದ್ ‘ಒಳ್ಳೆರೀತಿಲಿ ಜೀವನ ಮಾಡ್ಕಂಡ್ ಇರಿ’ ಅಂದ್ರ್. ಆದರೆ ಜನ ಜಾಗ ಸಿಕ್ಕಿದ್ ಕುಸಿಲಿ ಧರ್ಮ ಕರ್ಮ ಬಿಟ್ಟ್ರ್.

ಆಗ ಪರಶುರಾಮರಿಗೆ ಸಿಟ್ಟ್ ಬಂದ್ ‘ನಿಮ್ಮದು ಅರೆ ಹೊಟ್ಟೆ, ಅರೆ ಬಟ್ಟೆ, ಅರೆ ಭಾಷೆ ಆಯ್ಲಿ’ ಎಂದ್ ಶಾಪ ಕೊಟ್ಟ್ರ್. ಅದಕ್ಕೆ ಇಂದಿಗೂ ಇಲ್ಲಿ ನಾಲ್ಕ್ ಹೊತ್ ಉಂಡ್ರೂ ಹಸಿವು ಜೋರು ಇರುತ್, ಇಲ್ಲಿಯ ಬೆವರಿಗೆ ಮೈತುಂಬಾ ಬಟ್ಟೆ ಹಾಕುಕೆ ಕಷ್ಟ ಮತ್ ನಮ್ಮ್ ಭಾಷಿ ಅರ್ದವೆ. ಹೋಗಬೇಕು ಬರಬೇಕು ಎನ್ನಲು ಹೋಯ್ಕ್ ಬರ್ಕ್ ಎಂದು ಹೇಳ್ತೊ.

ನಮ್ ಭಾಷೆ ಕಣಂಗೆ ನಮ್ ಊರಿನ ಹವಾಮಾನವೂ ಬಹಳ ವಿಶೇಷವಾಗಿತ್ತೆ. ನನ್ನೂರು ಕುಂದಾಪುರ ತಾಲೂಕು ತೆಕ್ಕಟ್ಟೆ ಗ್ರಾಮದ ಒಂದು ಹಳ್ಳಿ ಅರೆಬೈಲ್ ಎಂದೇಳಿ. ಸವುಂದ್ರಕ್ಕೆ 2 ಕಿ.ಮೀ. ದೂರದಲ್ಲಿತ್ತೆ. ‘ಕಾಲಗಳು ಮೂರು ಬ್ಯಾಸ್ಗಿ ಕಾಲ, ಮಳ್ಗಾಲ ಮತ್ತು ಚಳಿಗಾಲ’ ಎಂದ್ ಶಾಲೆಲಿ ಬಾಯ್ ಪಾಠ ಮಾಡ್ರೂ ನಮ್ಮೂರಗೆ ಹೆಚ್ಚಿಪ್ಪುದು ಬ್ಯಾಸ್ಗಿ ಮತ್ ಮಳಿ. ಬ್ಯಾಸ್ಗಿ ಎಂದರೆ ಎಂತದೆ ಸೂರ್ಯ ಮೂಡ್ಕಾರ್ ಮುಂಚೆಯೇ ಸೆಕಿ ಸುರುವಾತತ್. ಮೈ ಬಟ್ಟೆ ಎಲ್ಲಾ ಯಾವಾಗಲೂ ಬೆವರಿನಿಂದ ಚಂಡಿ ಆಯಿರತ್.

ಈ ಸಮಿಕೇ ಮಕ್ಕಳ್ ಪರೀಕ್ಷೆ. ಮನೆಗಳಲ್ಲಿ ಶುಭ ಕಾರ್ಯಗಳಾದ ಮದಿ, ಮನಿವಕ್ಕಲು, ಅಲ್ಲದೆ ಊರ ಜಾತ್ರಿಗಳು. ಇದೆಲ್ಲವನ್ನೂ ಸಂತೋಷ ಸಡಗರದಿಂದ ಊರ್ ಜನ ಆಚರಿಸ್ತ್ರೆ. ‘ಮೈ ಬೆವರುವುದು ಆರೋಗ್ಯಕ್ಕೆ ಒಳ್ಳೆಯದು ದೇಹದ ಕೊಬ್ಬು ಕರಗುತ್ತದೆ ನೀವೆಲ್ಲಾ ಅದೃಷ್ಟವಂತರು’ ಎಂದು ಮಲೆನಾಡಿನವರು ಹೇಳಿದಾಗ ನಮಗೆ ನಗು ಬತ್ತೆ ನಾವ್ ಕೆಲಸ ಮಾಡ್ದೆ ಸುಮ್ನೆ ಕೂಕೊಂಡ್ರು ಬೆವರಿ ಕುಂತ್ ಜಾಗ ಚಂಡಿ ಆತ್ತೆ ಇದ್ ಎಷ್ಟ್ ಮುಜುಗರ ಅಲ್ದೆ. ಹೆಂಗಸರಿಗಂತೂ ಅಲಂಕಾರ ಮೇಕಪ್ಪು ಮಾಡ್ಕಂಬ್‌ಕೆ ಆತಿಲ್ಲ. ತಲೆಕೂದಲನ್ನು ಸದಾ ಎತ್ತಿ ಕಟ್ಟಿ, ಸೀರೆಯನ್ನು ಮೇಲೆತ್ತಿ ಕಟ್ಟಿ ಸೆರಗಿನಲ್ಲಿ ಗಾಳಿ ಹಾಯ್ಕಂತಾ ಬೆವರ್ ಒರಸ್ಕಂದೇ ಆತ್. ಗಂಡಸರಂತೂ ಒಂದ್ ಮುಂಡ್ ಸುತ್‌ಕಂಡ್ ಹೆಗಲಮೇಲ್ ಒಂದ್ ಟವಲ್ ಹಾಯ್ಕಂಡ್ ಆಗಾಗ ಬೆನ್ನ್ ತುರ್ಸಕಂಬ್ದ್ ಕೆಲ್ಸ.

ದಿನಕ್ಕೆ ಮೂರ್ ಸಾರಿ ಮಿಂದ್ರೂ ಬೆವರ್ ವಾಸ್ನೆ ಕಮ್ಮಿ ಆತಿಲ್ಯೆ, ರಾತ್ರಿ ಕರೆಂಟ್ ಏನಾರು ಹೋದ್‌ರೆ ನಮ್ಮ್ ಕತಿ ಹೈಲೆ. ನುಸಿ ಕಾಟಕ್ಕೆ ಜಾಗರಣೆಯೇ ಗಟ್ಟಿ. ಹಗಲೆಲ್ಲಾ ಕಲ್ಲ್ ಕಂಬದ್ದ್ ಕಣಂಗೆ ನಿಂತ್ತಿದ್ ಮರಗಳು ಬೈಯಾಪತ್ತಿಗೆ ಸಂವುದ್ರದ್ ಮೇಲಿಂದ್ ಗಾಳಿ ಬಪ್ಪುಕು ಅಲ್ಲಾಡುಕ್ ಸುರುವಾತ್. ಆಗ ನಮಗೂ ಆರಾಮ್ ಆತ್ತ್. ಬ್ಯಾಸ್ಗೆಲಿ

